ಹಿರಿಯ ವ್ಯವಹಾರ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ., ನ್ಯಾಯಾಲಯ
ಶಿಕಾರಿಪುರ.

ಸಿಸಿ ನಂ. **342/2024**

| | | |
|---|---|---|
| ಸಾಕ್ಷಿದಾರರ ಹೆಸರು | ಬಿ ಎನ್ ಬೂದ್ಯಪ್ಪ | ಪಿ.ಡಬ್ಲ್ಯೂ- 3 |
| ತಂದೆ ಹೆಸರು | ನಾಗಪ್ಪ | ಸಿಡಬ್ಲ್ಯು- 6 |
| ವಯಸ್ಸು | 60 | |
| ಉದ್ಯೋಗ | ನಿವೃತ್ತ ಎಎಸ್ಐ | ಪ್ರತಿಜ್ಞೆ ಮೇರೆಗೆ ದಿನಾಂಕಃ |
| ವಾಸ | ಶಿವಮೊಗ್ಗ | **14.07.2025.** |

ಸಾಕ್ಷಿಗೆ ಪ್ರಮಾಣ ವಚನ ಭೋದಿಸಲಾಯಿತು.

<u>ಮುಖ್ಯ ವಿಚಾರಣೆ ಸಸಅ ರವರಿಂದಃ-</u>

1. ನಾನು ಶಿಕಾರಿಪುರ ಪಟ್ಟಣ ಪೋಲೀಸ್ ಠಾಣೆಯಲ್ಲಿ ಎಎಸ್ಐ ಆಗಿ 2018 ರಿಂದ 30.06.2025 ರವರೆಗೆ ಕೆಲಸ ನಿರ್ವಹಿಸಿರುತ್ತೇನೆ.

2. ದಿಃ 11.06.2024 ರಂದು ರಾತ್ರಿ 11.15 ಗಂಟೆಗೆ ನಾನು ಠಾಣಾ ಪ್ರಭಾರದಲ್ಲಿದ್ದಾಗ ಚಾಸಾ- 1 ರವರು ಠಾಣೆಗೆ ಹಾಜರಾಗಿ ಆರೋಪಿ ಮತ್ತು ಆರೋಪಿ ಗಾಂಜಾ ಸೇವನೆ ಮಾಡಿದ್ದ ಬಗ್ಗೆ ದೃಡೀಕರಣ ಪತ್ರವನ್ನು ನನ್ನ ಮುಂದೆ ಹಾಜರುಪಡಿಸಿ ಅವರ ವಿರುದ್ಧ ಕ್ರಮ ವಹಿಸುವಂತೆ ಗಣಕೀಕೃತ ದೂರು ಕೊಟ್ಟಿರುತ್ತಾರೆ. ನಾನು ಸದರಿ ದೂರಿನ ಆಧಾರದ ಮೇಲೆ ಠಾಣಾ ಮೊಕದ್ದಮೆ ಸಂಖ್ಯೆ 89/2024 ರಂತೆ ಪ್ರಕರಣ ದಾಖಲಿಸಿ ಪ್ರವವರದಿಯನ್ನು ಮಾನ್ಯ ನ್ಯಾಯಾಲಯಕ್ಕೆ ಹಾಗೂ ನನ್ನ ಮೇಲಾಧಿಕಾರಿಗಳಿಗೆ ನಿವೇದಿಸಿಕೊಂಡಿರುತ್ತೇನೆ. ಸಾಕ್ಷಿ ಸದರಿ ಪ್ರವವರದಿಯನ್ನು ನೋಡಿ ಗುರುತಿಸಿದ್ದು, ಅದನ್ನು ನಿಪಿ - 2 ಎಂದು, ಸಾಕ್ಷಿಯ ಸಹಿಯನ್ನು ನಿಪಿ - 2(ಎ) ಎಂದು ಗುರುತಿಸಲಾಯಿತು. ಅದೇ ರೀತಿ ಸಾಕ್ಷಿ ದೂರನ್ನು ನೋಡಿ ಗುರುತಿಸಿದ್ದು, ಅದನ್ನು ನಿಪಿ - 3 ಎಂದು, ಸಾಕ್ಷಿಯ ಸಹಿಯನ್ನು ನಿಪಿ 3(ಎ) ಎಂದು ಗುರುತಿಸಲಾಯಿತು. ಅದೇ ರೀತಿ ಸಾಕ್ಷಿ ವೈದ್ಯರು ಕೊಟ್ಟ ವರದಿಯನ್ನು ನೋಡಿ ಗುರುತಿಸಿದ್ದು, ಅದನ್ನು ಈಗಾಗಲೇ ನಿಪಿ - 1 ಎಂದು ಗುರುತಿಸಲಾಗಿದ್ದು, ಸಾಕ್ಷಿಯ ಸಹಿಯನ್ನು ನಿಪಿ - 1(ಬಿ) ಎಂದು ಗುರುತಿಸಲಾಯಿತು.

3. ನಂತರ ದಿಃ 12.06.2024 ರಂದು ಪ್ರತ್ಯಕ್ಷ ಸಾಕ್ಷಿದಾರರಾದ ಚಾಸಾ - 2 ರಿಂದ 4 ರವರ ಹೇಳಿಕೆ ಪಡೆದಿರುತ್ತೇನೆ. ನಂತರ ಅದೇ ದಿನ ಆರೋಪಿಯನ್ನು ವೈಧ್ಯಕೀಯ ವಿಚಾರಣೆಗೆ ಒಳಪಡಿಸಿ ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೆ. ನಂತರ ತನಿಖೆ ಮುಕ್ತಾಯಗೊಂಡು ಆರೋಪಿ ವಿರುದ್ಧ ಆರೋಪಿ ಸಾಭೀತಾಗಿದ್ದರಿಂದ ಮಾನ್ಯ ನ್ಯಾಯಾಲಯಕ್ಕೆ ಅಂತಿಮ ವರದಿ ಸಲ್ಲಿಸಿರುತ್ತೇನೆ. ಆರೋಪಿಯನ್ನು ನೋಡಿದರೆ ಗುರುತಿಸುತ್ತೇನೆ. ಈ ದಿನ ಆರೋಪಿ ಗೈರು ಹಾಜರಿದ್ದು, ಗುರುತಿಸುವ ಬಗ್ಗೆ ಆರೋಪಿ ಪರ ವಕೀಲರ ತಕರಾರು ಇರುವುದಿಲ್ಲ.

<u>ಪಾಟೀ ಸವಾಲುಃ ಆರೋಪಿ ಪರ ಶ್ರೀ ಪಿ ಜೆ ವಿ ವಕೀಲರಂದಃ</u>

4. ಈ ಪ್ರಕರಣದಲ್ಲಿ ದೂರುದಾರರು, ಪ್ರತ್ಯಕ್ಷ ಸಾಕ್ಷಿದಾರರು ಮತ್ತು ತನಿಖಾಧಿಕಾರಿಗಳು ಎಲ್ಲರೂ ನಮ್ಮ ಇಲಾಖೆಯ ಪೋಲೀಸ್ ನವರು ಎಂದರೆ ಸರಿ. ನನ್ನ ತನಿಖಾ ವರದಿಯಲ್ಲಿ ನಾನು ಪಾರ್ಕ್ ಗೆ ಭೇಟಿ ಕೊಟ್ಟು ಅಲ್ಲಿ ಪ್ರತ್ಯಕ್ಷ ಸಾಕ್ಷಿದಾರರ ಹೇಳಿಕೆ ಪಡೆಯಲು ಪ್ರಯತ್ನಿಸಿಲ್ಲ. ಅದು ಸಾರ್ವಜನಿಕ ಪಾರ್ಕ್ ಆಗಿದ್ದು, ಅಲ್ಲಿ ಸಿಸಿಟಿವಿ ವ್ಯವಸ್ಥೆ ಇದ್ದು, ಅಲ್ಲಿ ನಾವು ಯಾವುದೇ ಸಿಸಿಟಿವಿ ಫೂಟೇಜ್ ಪಡೆಯಲು ಪ್ರಯತ್ನಪಟ್ಟಿಲ್ಲ. ಆರೋಪಿ ಬಳಿ ಆ ದಿನ ನಮಗೆ ಯಾವುದೇ ಗಾಂಜಾ ಸಿಕ್ಕಿಲ್ಲ. ಆರೋಪಿ ಯಾವುದೇ ತಪ್ಪು ಮಾಡದೇ ಇದ್ದರೂ ನಾನು ಇಲಾಖೆಯವರ ಮಾತು ಕೇಳಿ ಸುಳ್ಳು ಪ್ರಕರಣ ದಾಖಲಿಸಿ ಸುಳ್ಳು ಅಂತಿಮ ವರದಿ ಸಲ್ಲಿಸಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆಃ ಇಲ್ಲ

ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಲ್ಲಿ ಬೆರಳಚ್ಚು ಮಾಡಲಾಗಿದೆ.

ಓ ಹೇ ಕೇ ಸ ಇದೆ.

ಹಿರಿಯ ವ್ಯವಹಾರ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ., ಶಿಕಾರಿಪುರ.